# ಒಂದು ಸಮಾಧಿಯ ಹಿಂದೆ...

ನಂದಿ ಬೆಟ್ಟದ ಮೇಲೆ ಸೋಫಿಯಾ ಗ್ಯಾರೆಟ್ ಹೆಸರಿನಲ್ಲಿ ಸಮಾಧಿಯೊಂದಿದೆ. ಈ ಬ್ರಿಟಿಷ್ ಮಹಿಳೆಯ ವಿವರಗಳನ್ನು ಹುಡುಕಿದರೆ, ಕನ್ನಡನಾಡಿನ ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದ ಕುತೂಹಲಕರ ಅಂಶಗಳು ತೆರೆದುಕೊಳ್ಳುತ್ತವೆ.

■ ಡಿ.ಜಿ. ಮಲ್ಲಿಕಾರ್ಜುನ

ನಂದಿ ಬೆಟ್ಟದ ಬ್ಯಾಂಬೂ ಹೌಸ್ ಪರಿಸರದ ಒಂದು ಮೂಲೆಯಲ್ಲಿ ಕಂಡೂ ಕಾಣದಂತೆ ಒಂದು ಹಳೆಯ ಸಮಾಧಿಯಿದೆ. ಹತ್ತಿರ ಹೋಗಿ ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ಅದು ಕಾಣಸಿಗುತ್ತದೆ. ಒಂದೂವರೆ ಶತಮಾನಕ್ಕೂ ಹಿಂದಿನ ಈ ಸಮಾಧಿ ಐತಿಹಾಸಿಕ ದಾಖಲೆಯಾಗುಳಿದಿದೆ.

ಆ ಸಮಾಧಿ ಒಬ್ಬ ಬ್ರಿಟಿಷ್ ಮಹಿಳೆಯದ್ದು. ಆಕೆಯ ಹೆಸರು ಸೋಫಿಯಾ ಗ್ಯಾರೆಟ್. ಸಮಾಧಿ ಕಲ್ಲಿನ ಮೇಲೆ ಆಕೆಯ ಹೆಸರಿದೆ. ‘57 ವರ್ಷ ವಯಸ್ಸಿನ ಈಕೆಯನ್ನು ಜೀಸಸ್ ತಮ್ಮೊಂದಿಗೆ ಕರೆದೊಯ್ದಿದ್ದಾರೆ’ ಎಂದು ಕೆತ್ತಿದ್ದಾರೆ. ‘ನಂದಿದುರ್ಗದಲ್ಲಿ ಏಪ್ರಿಲ್ 10, 1867ರಂದು ನಿಧನರಾದ ಜಾನ್ ಗ್ಯಾರೆಟ್‌ರ ಪ್ರಿಯ ಪತ್ನಿ ಸೋಫಿಯಾ ಗ್ಯಾರೆಟ್ ಅವರ ನೆನಪಿನಲ್ಲಿ’ ಎನ್ನುವ ವಿವರವೂ ಇದೆ.

ಸೋಫಿಯಾ ಗ್ಯಾರೆಟ್ ಎಂಬ ಬ್ರಿಟಿಷ್ ಮಹಿಳೆಯ ಬಗ್ಗೆ ಇತಿಹಾಸದ ಪುಟಗಳನ್ನು ತಿರುವಿದಾಗ ಕುತೂಹಲಕರ ಅಂಶಗಳು ತೆರೆದುಕೊಳ್ಳುತ್ತವೆ. ಈಕೆಯ ಪತಿ ರೆವರೆಂಡ್ ಜಾನ್ ಗ್ಯಾರೆಟ್ ಬೆಂಗಳೂರಿನಲ್ಲಿ ಬ್ರಿಟಿಷ್ ಕಾಲದಲ್ಲಿ ಶಿಕ್ಷಣ ನಿರ್ದೇಶಕರಾಗಿದ್ದರು.

ನಂದಿಬೆಟ್ಟದಲ್ಲಿರುವ ಸೋಫಿಯಾ ಗ್ಯಾರೆಟ್ ಸಮಾಧಿ ನೋಡಿದಾಗ ನಮ್ಮ ನಾಡಿಗೆ ಗ್ಯಾರೆಟ್ ಕುಟುಂಬದ ಕೊಡುಗೆಗಳು ನೆನಪಾಗುತ್ತವೆ. ರೆವರೆಂಡ್ ಜಾನ್ ಗ್ಯಾರೆಟ್ ಮತಪ್ರಚಾರಕರಾಗಿ ಬೆಂಗಳೂರಿಗೆ ಬಂದವರು, ನಂತರ ಶಿಕ್ಷಣ ತಜ್ಞರಾದರು. ಗ್ಯಾರೆಟ್ ದಂಪತಿ ಕನ್ನಡವನ್ನು ಕಲಿತು, ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ನೀಡುವ ಉದ್ದೇಶದಿಂದ 1842ರಲ್ಲಿ ‘ಮಿತ್ರಾಲಯ’ ಎಂಬ ವಸತಿ ಶಾಲೆಯನ್ನು ತೆರೆದರು. ಇದು ಈಗಲೂ ಬೆಂಗಳೂರಿನ ಮಿಷನ್ ರಸ್ತೆಯಲ್ಲಿದೆ. ಈಗಿನ ಸೆಂಟ್ರಲ್ ಕಾಲೇಜ್ ಅನ್ನು ಆಗ ಸೆಂಟ್ರಲ್ ಹೈಸ್ಕೂಲ್ ಎನ್ನುತ್ತಿದ್ದರು. ಅದರ ಮೊದಲ ಪ್ರಾಂಶುಪಾಲರು ರೆವರೆಂಡ್ ಜಾನ್ ಗ್ಯಾರೆಟ್. ಬೆಂಗಳೂರು ಅರಮನೆಯಿರುವ ಪ್ರದೇಶವನ್ನು 1873ರಲ್ಲಿ ಮೈಸೂರು ಮಹಾರಾಜರು, ರೆವರೆಂಡ್ ಜಾನ್ ಗ್ಯಾರೆಟ್ ಅವರಿಂದ ಕೊಂಡುಕೊಂಡರು. 1862ರಲ್ಲಿ ಗ್ಯಾರೆಟ್ ಅವರು ಅಲ್ಲೊಂದು ಮಹಲನ್ನು ನಿರ್ಮಿಸಿಕೊಂಡಿದ್ದರು. ಅದನ್ನೇ ಮಹಾರಾಜರು ಇಂಗ್ಲೆಂಡಿನ ‘ವಿಂಡ್ಸರ್ ಕ್ಯಾಸಲ್’ ಮಾದರಿಯಲ್ಲಿ ಮುಂದೆ ಪುನರ್ ನಿರ್ಮಿಸಿದರು.

1849ರಲ್ಲಿ ಬೆಂಗಳೂರಿನ ‘ವೆಲಿಯನ್ ಮಿಷನ್ ಪ್ರೆಸ್’ ಭಗವದ್ಗೀತೆಯ ಕನ್ನಡ ಅನುವಾದವನ್ನು ಪ್ರಕಟಿಸಿತ್ತು. ಸಂಸ್ಕೃತಕನ್ನಡ ಇಂಗ್ಲಿಷ್ ಮೂರು ಸಮಾನಾಂತರ ಅಂಕಣಗಳಲ್ಲಿರುವಂತೆ ಪ್ರಕಟವಾದ ಈ ಪುಸ್ತಕದ ಸಂಪಾದಕರು ರೆವರೆಂಡ್ ಜಾನ್ ಗ್ಯಾರೆಟ್.

ರೆವರೆಂಡ್ ಜಾನ್ ಗ್ಯಾರೆಟ್ ಅವರ ಒಂದು ಕಟ್ಟಡ ನಂದಿಬೆಟ್ಟದ ಮೇಲೂ ಇತ್ತು. ಬೆಟ್ಟದ ಮೇಲಿನ ಹವಾಮಾನ ಥೇಟ್ ಯೂರೋಪ್‌ನಂತೆ ಇರುತ್ತದೆ ಎಂದು ಬ್ರಿಟಿಷ್ ಅಧಿಕಾರಿಗಳು ಮತ್ತು ಅವರ ಕುಟುಂಬದವರು ಬೇಸಿಗೆಯಲ್ಲಿ ಬಂದು ತಂಗುತ್ತಿದ್ದರು. ಗ್ಯಾರೆಟ್ ದಂಪತಿ ತಮ್ಮ ಮಗಳು ಮತ್ತು ಅಳಿಯನ ಜೊತೆಯಲ್ಲಿ ನಂದಿಬೆಟ್ಟದ ಮೇಲಿನ ಮನೆಯಲ್ಲಿ ಉಳಿಯುತ್ತಿದ್ದರು. ಗ್ಯಾರೆಟ್ ದಂಪತಿಯ ಅಳಿಯ ಬೆಂಜಮಿನ್ ಲೂಯಿಸ್ ರೈಸ್ ‘ಕನ್ನಡ ಶಾಸನಶಾಸ್ತ್ರದ ಪಿತಾಮಹ’ ಎಂದೇ ಹೆಸರಾದವರು.

ಪ್ರತಿಕ್ರಿಯಿಸಿ: feedback@sudha.co.in




